# ಮಗುವಿಗೆ ತಲೆನೋವೆ?

**ಮಕ್ಕಳಿಗೆ ಹಲವು ಕಾರಣಗಳಿಗೆ ತಲೆನೋವು ಬರುತ್ತದೆ. ತಲೆಶೂಲೆಯ ಹಿಂದಿನ ಕಾರಣಗಳನ್ನು ಸರಿಯಾಗಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಬೇಕು.**

■ ಡಾ. ಕೆ.ಬಿ. ರಂಗಸ್ವಾಮಿ

ಇಪ್ಪತ್ತು ವರ್ಷಗಳ ಹಿಂದಿನ ಮಾತು. ಸುಮಾರು 10 ವರ್ಷದ ಬಾಲಕಿಯನ್ನು ತಜ್ಞ ವೈದ್ಯ ಮಿತ್ರರೊಬ್ಬರು ನನ್ನ ಬಳಿ ಕಳಿಸಿಕೊಟ್ಟಿದ್ದರು. ಸುಮಾರು ಹದಿನೈದು ದಿನಗಳಿಂದ ತಲೆನೋವು ಮತ್ತು ಆಗಾಗ ವಾಂತಿ ಎಂಬುದು ಅವಳ ಸಮಸ್ಯೆಯಾಗಿತ್ತು. ಅವಳನ್ನು ಕೂಲಂಕಷವಾಗಿ ವಿಚಾರಿಸಿದಾಗ ತಲೆನೋವು ಬೆಳಿಗ್ಗೆ ಹಾಸಿಗೆಯಿಂದ ಎದ್ದೊಡನೆ ಉಲ್ಬಣಿಸುವುದೆಂದು ಮತ್ತು ವಾಂತಿ ಬಹಳ ಬಲಯುತವಾಗಿರುವುದೆಂದು ತಿಳಿಯಿತು. ನಾನು ತಲೆಬುರುಡೆಯ ಒಳಭಾಗದಲ್ಲಿ ಯಾವುದೋ ಗಂಭೀರ ಸಮಸ್ಯೆ ಇರಬಹುದೆಂದು ಶಂಕಿಸಿ, ಸಿ ಟಿ ಸ್ಕ್ಯಾನ್ ಮಾಡಿಸಿಕೊಂಡು ಬರಲು ಹೇಳಿದೆ. ಅದರ ಪ್ರಕಾರ ಆಕೆಗೆ ಪಿಟ್ಯುಟರಿ ಗ್ರಂಥಿಯಿರುವ ಭಾಗದಲ್ಲಿ 'ಕ್ರೇನಿಯೋಫೆರಿಂಜಿಯೋಮ' ಎಂಬ ಒಂದು ಮೆದುಳುಗಡ್ಡೆ ಇರುವುದಾಗಿ ತಿಳಿದು ಬಂದಿತು. ಮುಂದಿನ ಕ್ರಮಕ್ಕಾಗಿ ಅವಳನ್ನು ನರಮಂಡಲದ ಶಸ್ತ್ರಚಿಕಿತ್ಸಕರ ಬಳಿ ಕಳಿಸಿಕೊಟ್ಟಿದ್ದೆ.

***

'ಯಾಕೋ ಬೆಳಿಗ್ಗೆಯಿಂದ ಒಂದೇ ಸಮನೆ ತಲೆನೋಯ್ತಿದೆ' ಎಂತಲೋ 'ತಲೆ ಸಿಡಿದ್ಹಂಗೆ ಆಗ್ತಿದೆ' ಎಂತಲೋ ಅವರಿವರು ಹೇಳುವುದನ್ನು ದಿನನಿತ್ಯದ ಬದುಕಿನಲ್ಲಿ ನಾವು ಕೇಳುತ್ತಲೇ ಇರುತ್ತೇವೆ. ತಲೆನೋವು, ತಲೆಬೇನೆ, ತಲೆಶೂಲೆ ಹೀಗೆ ಯಾವುದೇ ಪದ ಬಳಸಿದರೂ ಅನುಭವ ಮಾತ್ರ ಒಂದೇ ಆಗಿರುತ್ತದೆ. ತಮ್ಮ ಮುದ್ದಿನ ಮಗು 'ತಲೆನೋವು' ಎಂದು ಹೇಳಿದರಂತೂ ಹೆತ್ತವರಿಗೆ ಆಕಾಶವೇ ಕಳಚಿಬಿದ್ದಂತಾಗುತ್ತದೆ. ಇದೇ ಕಾರಣದಿಂದ ಹಲವು ಮಕ್ಕಳು ಶಾಲೆಗೆ ಗೈರು ಹಾಜರಾಗುವುದು ಉಂಟು. ವಾಸ್ತವವಾಗಿ ಇನ್ನಿತರ ನೋವಿನಂತೆ ತಲೆನೋವೂ ಸಹ ಒಂದು ರೋಗ ಲಕ್ಷಣವೇ ಹೊರತು ಅದೇ ಒಂದು ಕಾಯಿಲೆಯಾಗಿರುವುದಿಲ್ಲ. ಯಾವುದೇ ಒಂದು ಕಾಯಿಲೆಯಿಂದಲೋ ಅಥವಾ ದೇಹದ ಸಹಜಸ್ಥಿತಿಯಲ್ಲಿ ಉಂಟಾಗಿರುವ ಏರುಪೇರಿನಿಂದಲೋ ತಲೆನೋವು ಬರುತ್ತದೆಂಬುದನ್ನು ಮೊದಲು ನಾವೆಲ್ಲರೂ ಮನದಟ್ಟು ಮಾಡಿಕೊಳ್ಳಬೇಕು. ಅಂತಹ ಸಮಸ್ಯೆ ಲಘುಸ್ವರೂಪದ್ದೋ ತೀವ್ರಸ್ವರೂಪದ್ದೋ ಎಂಬ ಮಾಹಿತಿ ಸ್ವಲ್ಪಮಟ್ಟಿಗಿದ್ದರೆ ಅದಕ್ಕೆ ತಕ್ಕಂತೆ ಸ್ಪಂದಿಸಲು ಅನುಕೂಲವಾಗುತ್ತದೆ.



### ತಲೆನೋವು ಹೇಗೆ ಉಂಟಾಗುತ್ತದೆ?

ವಾಸ್ತವವಾಗಿ ನೋವಿನ ಸಂವೇದನೆಯನ್ನು ಮೆದುಳು ಹೊಂದಿರುವುದಿಲ್ಲ. ಆದರೆ ತಲೆಬುರುಡೆಯ ಒಳಗಿರುವ ಮೆದುಳುಪೊರೆ ಮತ್ತು ರಕ್ತನಾಳಗಳು ನೋವಿಗೆ ಶೀಘ್ರವೇ ಸ್ಪಂದಿಸುತ್ತವೆ. ಹಾಗೆಯೇ ತಲೆಬುರುಡೆಯ ಹೊರಗಿನ ಅಂಗಗಳಾದ ಕಣ್ಣುಗುಡ್ಡೆ, ಕಿವಿ, ಮೂಗಿನಕುಳಿ, ಗಂಟಲು ಮತ್ತು ಹಲ್ಲುಗಳ ಸಮಸ್ಯೆಯಿಂದ ನೋವು ತಲೆಯಲ್ಲಿ ಕಾಣಿಸಿಕೊಳ್ಳಬಹುದು. ಮುಖ ಮತ್ತು ಕುತ್ತಿಗೆಯ ಸ್ನಾಯುಗಳ ಸೆಳೆತದಿಂದಲೂ ನೋವು ಉಂಟಾಗಬಹುದು. ಕೆಲವೊಮ್ಮೆ ಬೇರಾವುದೇ ಆರೋಗ್ಯ ಸಮಸ್ಯೆಗಳಿಲ್ಲದೆಯೂ ತಲೆನೋವು ಬರುವುದುಂಟು. ಇದಕ್ಕೆ ಉತ್ತಮ ಉದಾಹರಣೆಗಳೆಂದರೆ ಮೈಗ್ರೇನ್ ಮತ್ತು ಒತ್ತಡದ ತಲೆನೋವು.

### ತಲೆನೋವಿಗೆ ಸುಳಿವುಗಳು

ಜ್ವರ: ಇನ್‌ಫ್ಲ್ಯುಯೆಂಜಾ, ಡೆಂಗಿ, ಚಿಕನ್‌ಗುನ್ಯ ಮುಂತಾದ ವೈರಾಣುಗಳ ಸೋಂಕು (ಡೆಂಗಿ ಜ್ವರದಲ್ಲಿ ಕಣ್ಣುಗಳ ಹಿಂಬದಿಯಲ್ಲಿ ನೋವಿರುತ್ತದೆ). ಮೆದುಳುಪೊರೆಯ ಉರಿಯೂತ, ಮೂಗಿನ ಕುಳಿಗಳ ಉರಿಯೂತ ಇತ್ಯಾದಿ

ವಾಂತಿ: ಮೆದುಳುಪೊರೆಯ ಉರಿಯೂತ, ಮೆದುಳುಗಡ್ಡೆಗಳು, ಮೈಗ್ರೇನ್ ಇತ್ಯಾದಿ

ಕೆಮ್ಮಿದಾಗ ನೋವು ತೀವ್ರವಾಗುವುದು: ತಲೆಬುರುಡೆಯೊಳಗಿನ ಏರೊತ್ತಡ

ಬೆಳಿಗ್ಗೆ ಹಾಸಿಗೆಯಿಂದ ಎದ್ದೊಡನೆ ಉಲ್ಬಣಿಸುವ ತಲೆನೋವು ಮತ್ತು ತಲೆಬುರುಡೆಯ ಒಂದು ನಿರ್ದಿಷ್ಟ ಭಾಗಕ್ಕೆ ಸೀಮಿತವಾದ ತಲೆನೋವು

- ಮೈಗ್ರೇನ್: 4ರಿಂದ 72 ಗಂಟೆಗಳವರೆಗೆ ಇರುತ್ತದೆ
- ಒಂದೇ ಪಾರ್ಶ್ವದಲ್ಲಿ ತಲೆನೋವು. ಮಕ್ಕಳಲ್ಲಿ ಎರಡೂ ಪಾರ್ಶ್ವಗಳಲ್ಲಿ ಇರಬಹುದು
- ತೀವ್ರ ಸ್ವರೂಪದ ನಾಡಿ ಮಿಡಿತದಂಥ ನೋವು
- ದಿನನಿತ್ಯದ ಚಟುವಟಿಕೆಯಲ್ಲಿ ಏರುಪೇರು
- ವಾಂತಿ ಮತ್ತು ವಾಕರಿಕೆ
- ಬೆಳಕನ್ನು ದೃಷ್ಟಿಸಲು ತೊಂದರೆ
- ಕುಟುಂಬದ ಸದಸ್ಯರಲ್ಲಿ ಇಂಥದೇ ತಲೆನೋವಿರುವುದು
- ತಲೆನೋವಿನ ಸುಳಿವು ನೀಡಬಹುದಾದ ಕೆಲ ಪರೀಕ್ಷೆಗಳು
- ಸಿ ಟಿ ಸ್ಕ್ಯಾನ್/ ಎಂ ಆರ್ ಐ
- ಮೆದುಳುದ್ರವದ ಪರೀಕ್ಷೆ
- ಮೂಗಿನಕುಳಿಗಳ ಎಕ್ಸರೇ
- ದೃಷ್ಟಿ ಪರೀಕ್ಷೆ/ ದಂತ ಪರೀಕ್ಷೆ ಇತ್ಯಾದಿ

### ತಲೆನೋವು; ಕಾರಣ

- ಅಲ್ಪಾವಧಿಯ ತಲೆನೋವು
- ಗಂಟಲಿನ ಉರಿಯೂತ
- ಮೂಗಿನಕುಳಿಗಳ ಉರಿಯೂತ
- ಮೆದುಳುಪೊರೆಯ ಉರಿಯೂತ
- ತಲೆಬುರುಡೆಯೊಳಗಿನ ರಕ್ತಸ್ರಾವ
- ರಕ್ತದ ಏರೊತ್ತಡ
- ಪದೇ ಪದೇ ಬರುವ ತಲೆನೋವು
- ಮೈಗ್ರೇನ್

### ಚಿಕಿತ್ಸಾ ಕ್ರಮಗಳು

ತಲೆನೋವಿನ ಕಾರಣವನ್ನು ಸಮರ್ಪಕವಾಗಿ ಗುರುತಿಸಿ ಮತ್ತು ಪರೀಕ್ಷೆಗಳಿಂದ ದೃಢೀಕರಿಸಿ ಸೂಕ್ತ ಚಿಕಿತ್ಸೆಯನ್ನು ನೀಡಬೇಕು. ವೈರಾಣುಗಳ ಸೋಂಕು, ಒತ್ತಡದ ತಲೆನೋವು ಮುಂತಾದ ಲಘು ಸ್ವರೂಪದ ತಲೆನೋವಿಗೆ ನೋವು ನಿವಾರಕಗಳು ಸಾಕಾಗುತ್ತವೆ. ಆದರೆ ದೃಷ್ಟಿದೋಷ, ಮೈಗ್ರೇನ್ ಮುಂತಾದ ತಲೆನೋವಿಗೆ ಕಾರಣಕ್ಕನುಗುಣವಾದ ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ. ತೀವ್ರಸ್ವರೂಪದ ಬಹುದಿನಗಳ ಮಗುವಿನ ತಲೆನೋವಿಗೆ ಮೆದುಳುಪೊರೆಯ ಉರಿಯೂತ, ಮೆದುಳುಗಡ್ಡೆ ಮುಂತಾದ ಗಂಭೀರ ಸಮಸ್ಯೆಗಳಿರಬಹುದಾದ್ದರಿಂದ ಯಾವುದೇ ಕಾರಣಕ್ಕೂ ಉದಾಸೀನ ತೋರದೆ ಮಗುವನ್ನು ಪರಿಣಿತ ವೈದ್ಯರ ಬಳಿ ತೋರಿಸಬೇಕು.

(ವೈದ್ಯರ ಸಂಪರ್ಕ: 9880709766)